ಓಎಸ್ 259/2022

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 18.06.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಬಿ.ಎಸ್. ವಕೀಲರಿಂದ**

1ನೇ ಪ್ರತಿವಾದಿಯು ಬಿಲ್ಡಿಂಗ್ ಕಂಟ್ರೆಕ್ಟರ್ ಆಗಿರುತ್ತಾರೆ ಮತ್ತು 2ನೇ ಪ್ರತಿವಾದಿ 1ನೇ ಪ್ರತಿವಾದಿಯ ಸಹಾಯಕ ಕೆಲಸಗಾರರು ಆಗಿರುತ್ತಾರೆ. ನಾನು 1ನೇ ಪ್ರತಿವಾದಿಯೊಂದಿಗೆ ದಿಃ 29.11.2017 ರಂದು ನನಗೆ ಸೇರಿದ ದಾವ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಒಂದು ಕರಾರು ಮಾಡಿರುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಕರಾರಿನಂತೆ ನಾನು ಕಟ್ಟಡ ಕಟ್ಟಲು ದಾವ ಆಸ್ತಿಯ ಸ್ವಾಧೀನವನ್ನು 1ನೇ ಪ್ರತಿವಾದಿಗೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ದಾವ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಕೆಲಸ ಮಾಡಲು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು 1ನೇ ಪ್ರತಿವಾದಿಯೊಂದಿಗೆ ಕರಾರು ಮಾಡಿಕೊಂಡಾಗ ದಾವ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟಲು ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. ದಿಃ 30.06.2016 ರಂದು ನಿಪಿ 11 ಅನುಮತಿ ಪತ್ರ ಪಡೆದಿರುತ್ತೇನೆ ಎಂದರೆ ಸರಿ. ನಿಪಿ 11 ರೊಂದಿಗೆ ನಾನು ಕಟ್ಟಡದ ನಕ್ಷೆಯನ್ನು ಸಹ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಕಟ್ಟಡದ ನಕ್ಷೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಸದರಿ ಕಟ್ಟಡದ ನಕ್ಷೆಯೂ ನನ್ನ ಬಳಿ ಇರುತ್ತದೆ. ನಿಪಿ 12 ರಂತೆ ಪುನಃ ರಿನಿವಲ್ ಮಾಡಿ ಅನುಮತಿ ಪತ್ರವನ್ನು ಪಡೆದಾಗ ಕಟ್ಟಡದ ನಕ್ಷೆಯು ಬದಲಾವಣೆ ಆಗಿರುತ್ತದೆ. 2 ಕಟ್ಟಡದ ನಕ್ಷೆಯನ್ನು ನ್ಯಾಯಾಲಯಕ್ಕೆ ಕೊಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ಇಂಜಿನಿಯರ್ ಆಗಿದ್ದು ಅವರೇ ಅವುಗಳನ್ನು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ.

2. 1ನೇ ಪ್ರತಿವಾದಿಯೊಂದಿಗೆ ಕರಾರು ಆದ ದಿವಸ ಕಟ್ಟಡದ ನಕ್ಷೆಯ ಬ್ಲ್ಯೂಪ್ರಿಂಟ್ ನನ್ನ ಬಳಿ ಇತ್ತು. ದಿಃ 29.11.2017ರ ಕರಾರನ್ನು ಹೊರತುಪಡಿಸಿ 1ನೇ ಪ್ರತಿವಾದಿ ಮತ್ತು ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಆಗಿರುವುದಿಲ್ಲ. ದಿಃ 29.11.2017ರ ಕರಾರಿಗೆ ಸ್ವಲ್ಪ

ವ್ಯತ್ಯಾಸವಾಗಿ ಕಟ್ಟಡವನ್ನು ಕಟ್ಟಲಾಗಿದೆ. ಸದರಿ ಕರಾರಿಗೆ ಹೆಚ್ಚುವರಿಯಾಗಿ ಕಟ್ಟಡ ಕಟ್ಟಲಾಗಿದೆಯಾ ಅಥವಾ ಕಡಿಮೆ ಕಟ್ಟಲಾಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಕರಾರಿನಲ್ಲಿ ತೋರಿಸಿರುವ ವಿಸ್ತೀರ್ಣಕ್ಕೆ ಕಟ್ಟಡ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಕರಾರಿನಲ್ಲಿ ಎಷ್ಟು ಪ್ರಮಾಣದ ಸಿಮೆಂಟ್ ಹಾಕಬೇಕು ಎಂದು ನಮೂದಿಸಿರಲಿಲ್ಲ. ಕಟ್ಟಡದ ಸಿಆರ್ ರಿಪೋರ್ಟನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವುದಿಲ್ಲ. ಕಟ್ಟಡದ ಕೆಲಸವು ಶೇ. 99 ರಷ್ಟು ಮುಗಿದಿದೆ. ದಿಃ 29.11.2017 ರಂದು ದಾವ ಆಸ್ತಿಯನ್ನು 1ನೇ ಪ್ರತಿವಾದಿಯ ಸ್ವಾಧೀನಕ್ಕೆ ವಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ